[redacted] **DAC – 410**

**ತೃತೀಯ ಬಿ.ಎ. ಪದವಿ ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2008**
**ಅಂಚೆ ಮತ್ತು ತೆರಪಿನ ಶಿಕ್ಷಣ**
**ಕನ್ನಡ ಐಚ್ಛಿಕ ಪತ್ರಿಕೆ – ಯುಕೆ – ೩**
**(ಛಂದಸ್ಸು ಮತ್ತು ಹಳಗನ್ನಡ ಪಠ್ಯಗಳು)**
**(ಪಂಪಭಾರತ ಸಂಗ್ರಹ, ವಡ್ಡಾರಾಧನೆ ಮತ್ತು ಛಂದಸ್ಸು)**

ಅವಧಿ : 3 ಗಂಟೆಗಳು ಅಂಕಗಳು : 70

**('ಅ' ವಿಭಾಗ – ಹಳಗನ್ನಡ ಪಠ್ಯಗಳು)**

1\. ಅ) ಒಂದರ ಭಾವ ಸ್ವಾರಸ್ಯವನ್ನು ಬರೆಯಿರಿ. 7

೧) ಮರದ ಮೇಗಿರ್ದ ವೃದ್ಧಸ್ತ್ರೀಯಂ ಕಂಡು ನೀನಾರ್ಗೆಂದಾತಂ
ಬೆಸಗೊಂಡೊಡಾಕೆಯಾನೀ ಮರದೊಳಿರ್ಪ ಯಕ್ಷದೇವತೆಯೆನೆಂ
ದೊಡಾತನೆನಗೆ ಪೆಂಡತಿಯಪ್ಪ ಎಂದು ಬೆಸಗೊಂಡೊಡೊಂದು
ಪಾಂಗಿನೊಳಪ್ಪೆನೀ ಪಿರಿತದ ಖಂಡಮಂ ನಾಲಗೆಯಿಂ ಕೀಳ್ದೆನ್ನ
ಬಾಯೊಳಿಡುವೊಡೆ ನಿನಗಾನ್ ಪೆಂಡತಿಯಪ್ಪೆನೆಂದು ನುಡಿದೊಡಾತನುಂ
ನಾಲಗೆಯಿಂದಂ ಪಿರಿತದ ಖಂಡಮಂ ಬಾಯೊಳಿಡೆ ನಾಲಗೆಯಂ
ಪಟಿಯೆ ಕಚ್ಚಿದೊಡವಂ ಪುಯ್ಯಲಿಟ್ಟಂ

೨) ಇದು ಪಾತಾಳ ಬಿಲಕ್ಕೆ ಬಾಗಿಲಿದು ದಲ್ ಘೋರಾಂಧಕಾರಕ್ಕೆ ಮಾ
ಡಿದ ಕೂಪಂ ಪೆಱತಲ್ತುದುಗ್ರ್ರಲಯ ಕಾಳಾಂಭೋಧರಚ್ಛಾಯೆ ತಾ
ನೆ ದಲೆಂಬಂತಿರೆ ಕಾಳಮೇಚಕಚಯಚ್ಛಾಯಾಧಿಕಂ ಗುಣ್ಪಿನಿಂ
ಪುದಿದಿರ್ದತ್ತು ಸರೋವರಂ ಬಕ ಬಳಾಕಾನೀಕ ರಾವಾಕುಳಂ

ಆ) ಎರಡಕ್ಕೆ ಟಿಪ್ಪಣಿ ಬರೆಯಿರಿ : 4
ನಾಗಶ್ರೀ, ವಿದ್ಯುಚ್ಚೋರ, ಘಟೋತ್ಕಚ, ಪಂಪನ ಕಾವ್ಯಗಳು

2\. ಮೂರಕ್ಕೆ ಸಂದರ್ಭ ಸೂಚಿಸಿ – ಸ್ವಾರಸ್ಯ ಬರೆಯಿರಿ. 9

೧) ಇವರ್ ಮೂರ್ಖರೇನುಮೋದುಗಳನಱಿಯರ್

೨) ಕರ್ಣರಸಾಯನಮಲ್ತೆ ಭಾರತಂ

೩) ದೇವಾ ನೀಂ ಗೆಲ್ದಿಯಾಂ ಸೋಲ್ತೆನುಂ ಸತ್ತೆನ್

೪) ಒಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ

೫) ಬಾಲಕವಧ ದೋಷಮೆಂತು ನೀಂ ನೀಗಿದಪಯ್

P.T.O

3. ಒಂದು ಪ್ರಶ್ನೆಗೆ ಉತ್ತರಿಸಿ. **10**

೧) ಅಗ್ನಿಭೂತಿ ಮತ್ತು ವಾಯುಭೂತಿಯರ ಬಾಲ್ಯ ಮತ್ತು ವಿದ್ಯಾಭ್ಯಾಸದ ಸನ್ನಿವೇಶಗಳನ್ನು ಪರಿಚಯಿಸಿರಿ.

೨) ವಿದ್ಯುಚ್ಚೋರ ಮತ್ತು ಯಮದಂಡರ ಪ್ರತಿಜ್ಞೆಗಳು ಈಡೇರಿದ ಬಗೆಯನ್ನು ವಿವರಿಸಿ.

4. ಯಾವುದಾದರು ಒಂದು ಪ್ರಶ್ನೆಗೆ ಉತ್ತರಿಸಿರಿ. **10**

೧) ದುಶ್ಶಾಸನನ ವಧಾ ಪ್ರಸಂಗವನ್ನು ಪರಿಚಯಿಸಿರಿ.

೨) ದುರ್ಯೋಧನನ ಪ್ರಲಾಪದ ಸನ್ನಿವೇಶಗಳನ್ನು ಸ್ಪಷ್ಟಪಡಿಸಿರಿ.

## 'ಆ' ವಿಭಾಗ – ಛಂದಸ್ಸು

5. ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **(10×2=20)**

೧) ಗಣ ಎಂದರೇನು ? ಗಣ ಪ್ರಭೇದಗಳನ್ನು ಸೋದಾಹರಣವಾಗಿ ಬರೆಯಿರಿ.

೨) ಕಂದದ ಲಕ್ಷಣ ಮತ್ತು ಇತಿಹಾಸವನ್ನು ಬರೆಯಿರಿ.

೩) ಹೊಸಗನ್ನಡ ಛಂದಸ್ಸಿನ ಮಟ್ಟುಗಳನ್ನು ಉದಾಹರಣೆಗಳೊಡನೆ ಪರಿಚಯಿಸಿರಿ.

AUGUST SEPTEMBER 2008

6. ಕೆಳಗಿನ ಎರಡು ಪದ್ಯಗಳಿಗೆ ಪ್ರಸ್ತಾರ ಹಾಕಿ ಗಣವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ. **(5×2=10)**

೧) ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ.

೨) ಆಮ್ನಾತಜೆಯದೆ ಮುಳಿದುಂ
ನಿಮ್ಮಡಿಯಂ ನೋಯೆ ನುಡಿದೆನುಱದೇಳಿಸಲೇ

೩) ನಲ್ಲೆ ಮುಡಿದ ಮೊಲ್ಲೆಯರಳು
ಇಲ್ಲೆ ನಿಲ್ಲಿರೆಂದಿತು